ಮಧುಕರ, ಪ್ರಭಾಕರ, ಸುಧಾಕರ, ವಿಪಿನಕರ... ಈ ಐವರ ಹೆಸರು, ರಿಜಿಸ್ಟರ್ ಸಂಖ್ಯೆ ಸಮೇತ ಬೇರೆ ಹಾಳೆಯಲ್ಲಿ ಬರೆದುಕೊಂಡೆ.

ಸ್ವಲ್ಪ ಹೊತ್ತಿಗೆ ಅಭ್ಯರ್ಥಿಗಳ ಹಾಜರಾತಿ ಶೀಟ್‌ಗಳು ನಾಗರಾಜನ ಕೈ ತಲುಪಿದವು.

'ಪರೀಕ್ಷೆಗೆ ಅಪ್ಲೈ ಮಾಡುವಾಗ ಇರುವ ಹುಮ್ಮಸ್ಸು ಬರೆಯುವ ದಿನ ಇರೋಲ್ಲ ಸರ್' ಆ ಶೀಟ್‌ಗಳತ್ತ ಒಮ್ಮೆ ಕಣ್ಣು ಹಾಯಿಸಿ ಹೇಳಿದ.

'ನಿಜ, ಅದರಲ್ಲೂ ಇದು ಸ್ಪರ್ಧಾತ್ಮಕ ಪರೀಕ್ಷೆ. ಯು ಹಾವ್ ಟು ಗಿವ್ ಯುವರ್ ಬೆಸ್ಟ್. ಆ ವಿಶ್ವಾಸವಿಲ್ಲದಿದ್ದರೆ ಪರೀಕ್ಷೆ ಬರೆಯೋದು ವ್ಯರ್ಥ. ಇಲ್ಕೊಡಿ, ಲೆಟ್ ಮೀ ಹ್ಯಾವ್ ಎ ಲುಕ್' ಎಂದೆ.

'ತೊಗೊಳ್ಳಿ ಸರ್' ಎಂದು ನನಗೆ ಕೊಟ್ಟ.

ಆರು ಪೇಜುಗಳಲ್ಲಿ ಆಬ್ಸೆಂಟ್ ಗುರುತುಗಳು 19, ಅಂದರೆ ಸ್ಪರ್ಧೆ 117 ಮಂದಿಗೆ ಮಾತ್ರ.

ನಾನು ಗುರುತು ಹಾಕಿಕೊಂಡ ಹೆಸರುಗಳ ಎದುರಿಗೆ ಸಹಿ ಇದೆಯೇ ನೋಡಿದೆ, ಮಧುಕರ, ವಿಪಿನಕರ ಗೈರು. ಅವುಗಳ ಸುತ್ತ ವರ್ತುಲ ಹಾಕಿದೆ. ನನ್ನ ತನಿಖೆಯ ವ್ಯಾಪ್ತಿಗೆ ಉಳಿದದ್ದು ಮೂವರು.

ಅಷ್ಟರಲ್ಲಿ ಕಾಫಿ ಬಂತು. ಒಂದೇ ಉಸಿರಿಗೆ ಗುಟುಕರಿಸಿ, ಪರೀಕ್ಷಾ ಕೊಠಡಿಗಳತ್ತ ನಡೆದೆ. ಕೊಠಡಿಗೆ ಐವತ್ತು ಮಂದಿಯ ಲೆಕ್ಕದಲ್ಲಿ ಮೂರು ಕೊಠಡಿಗಳು. ಮೊದಲ ಕೊಠಡಿಯಲ್ಲಿ ದಿನಕರ, ಮೂರನೆಯ ಕೊಠಡಿಯಲ್ಲಿ ಪ್ರಭಾಕರ, ಸುಧಾಕರ.

ದಿನಕರ ತಲೆ ಎತ್ತದೇ ಬರೆಯುತ್ತಿದ್ದ. ಬರವಣಿಗೆಯಲ್ಲಿ ಫ್ರೀ ಫ್ಲೋ ಇತ್ತು. ಪ್ರಭಾಕರ ಒಂದು ಗಂಟೆಯಾದರೂ ಮೂರೂ ಪುಟ ತುಂಬಿಸಿರಲಿಲ್ಲ. ಸುಧಾಕರ ಇರಲೇ ಇಲ್ಲ. ಮೇಲ್ವಿಚಾರಕರ ಟೇಬಲ್ ಮೇಲೆ ಅವನ ಪೇಪರ್ ಕಂಡಿತು.

'ಅರ್ಧ ಗಂಟೆ ಆದ ಕೂಡಲೇ ನಾಲ್ಕೈದು ಮಂದಿ ಹೊರಟುಹೋದರು ಸರ್.'

ಮೇಲ್ವಿಚಾರಕ ಪಿಸುಗುಟ್ಟಿದ. ಹಾಗಾದರೆ, ಸುಧಾಕರ ರೂಲ್ಡ್ ಔಟ್. ಹೇಗೂ ಬಂದಾಗಿದೆ ಎಂದು ಎರಡನೆಯ ಕೊಠಡಿಯನ್ನು ಸುತ್ತು ಹಾಕಿದೆ.

ಕೆಲವರು ಪೆನ್ಸಿಲ್, ಸ್ಕೇಲ್ ಸೇರಿಸಿದ್ದ ಬಾಕ್ಸ್ ತಂದಿದ್ದರು, ಅದನ್ನೊಮ್ಮೆ ಬಿಡಿಸಿ ಎಂದೆ. ಕೆಲವರು ಕೆಮ್ಮಿನ ಚೀಪುಗುಳಿಗೆಗಳನ್ನು ತಂದಿದ್ದರು. ಕೆಮ್ಮು, ಸೀನು ಬಂದರೆ ಬಾಯಿ ಮುಚ್ಚಿಕೊಳ್ಳಲೋ, ಸಿಂಬಳ ಹೊರತೆಗೆಯಲೋ, ಮೂಗು ಒರೆಸಿಕೊಳ್ಳಲೋ, ಬೆವರೊರೆಸಿಕೊಳ್ಳಲೋ ಅಥವಾ ಸೌಜನ್ಯಕ್ಕೋ ಕೈ ವಸ್ತ್ರಗಳನ್ನು ಟೇಬಲ್ ಮೇಲೆ ಇಟ್ಟುಕೊಂಡ ಅಭ್ಯರ್ಥಿಗಳೂ ಇದ್ದರು.

ಚೌಕಳಿ, ಸಾದಾ, ಚಿತ್ತಾರ ಮೂಡಿಸಿದ ನಾಲ್ಕೈದು ಅಂತಹ ಕರವಸ್ತ್ರಗಳು ಕಣ್ಣಿಗೆ ಬಿದ್ದವು.

ಯಾವ ವಿಶೇಷವೂ ಕಾಣಲಿಲ್ಲ.

★★★

ಅಂದಿನ ಪೇಪರ್ ಬಂಡಲ್ ಮಾಡಿ ತಂದರು ಮೇಲ್ವಿಚಾರಕರು. ಕ್ರಮವಾಗಿ ಇರಿಸಿ ಬಂಡಲ್ ಮಾಡಿ ಸೀಲ್ ಹಾಕಿ ಭದ್ರ ಕಪಾಟಿನಲ್ಲಿ ಇರಿಸುವ ಹೊತ್ತಿಗೆ ಗಂಟೆ ಎರಡೂವರೆಯಾಗಿತ್ತು.

★★★

ಮಾರನೇ ದಿನವು ಮಾಮೂಲಿನಂತೆ ಮೊದಲಾಯಿತು.

ಹನ್ನೊಂದರ ಹೊತ್ತಿಗೆ ನನ್ನ ಕಚೇರಿಯಿಂದ ಮೇಲ್ ಬಂದಿತ್ತು. ಹಿಂದೆಯೇ ಪಿ.ಎ. ಫೋನ್ ಮಾಡಿದ. ತುರ್ತಾಗಿ ಮಾಹಿತಿ ರವಾನೆಯಾಗಬೇಕಿದೆ, 'ಆಯಿತು, ಸ್ಟೆನೋಗೆ ಲೈನ್‌ಗೆ ಬರೋಕ್ಕೆ ಹೇಳಿ' ಎಂದೆ, 'ಸಾರಿ ಸರ್, ಅವರು ಇವತ್ತು ನಾಳೆ ಸಿ.ಎಲ್., ಬೇರೆ ಸೆಕ್ಷನ್‌ನಿಂದ ಕರೆಸಲೇ' ಎಂದಾಗ 'ಬೇಡ' ಎಂದೆ.

'ರೀ ನಾಗರಾಜ್, ಸ್ಟೆನೋಗ್ರಫಿ ಗೊತ್ತೇನ್ರಿ, ಬರೆದುಕೊಂಡಿದ್ದನ್ನು ಟೈಪ್ ಮಾಡಬೇಕಲ್ಲ?'